

## ಹಳೆ ಸೀರೆ

ಈ ಚಿತ್ರದಲ್ಲಿ ಕಾಣುವ ಸೀರೆಯ ವಯಸ್ಸು ಸರಿಯಾಗಿ 93 ವರ್ಷಗಳು, ನಮ್ಮ ಚಿಕ್ಕಮ್ಮ ವೀಣಾ ನಾಯಕ ಅವರ ಬಳಿ ಇದೆ. ಈಗ ಇವರ ವಯಸ್ಸು 78 ವರ್ಷ. ಈ ಸೀರೆ ವೀಣಾ ನಾಯಕ ಅವರ ತಂದೆ ತಾಯಿಯ ಮದುವೆಯದ್ದು. 1933ರಲ್ಲಿ ಗದಗದಲ್ಲಿ ನೇಯ್ದದ್ದು.

ಉತ್ತರ ಕರ್ನಾಟಕದಲ್ಲಿ ಇದನ್ನು ಮುತ್ತಿನ ಬಟ್ಟಿನ ಸೀರೆ ಅಥವಾ ಚದುರಂಗ ಚಿಕ್ಕಿ ಸೀರೆ ಎಂದೂ ಕರೆಯುತ್ತಾರೆ. 9 ಗಜದ ಈ ಸೀರೆ ಇನ್ನೂ ಸುಸ್ಥಿತಿಯಲ್ಲಿದೆ, ಮುಟ್ಟಿದರೆ ಹೊಸದರ ಅನುಭವ ಕೊಡುತ್ತದೆ! ವಿಶೇಷ ಸಂದರ್ಭಗಳಲ್ಲಿ ವೀಣಾ ನಾಯಕ ಅವರು ಇದನ್ನು ಇನ್ನೂ ಉಡುತ್ತಾರೆ.

–ರಾಮಚಂದ್ರ ನಾಯಕ, ಬೆಂಗಳೂರು

## 19ನೇ ಶತಮಾನದ ಮುದ್ರಣ ಯಂತ್ರ



ಇದು 19ನೇ ಶತಮಾನದ ಲಂಡನ್ ನಿರ್ಮಿತ ಕೈಚಾಲಿತ ಮುದ್ರಣ ಯಂತ್ರ. ಕಬ್ಬಿಣದ ಅಕ್ಷರಗಳಿಗೆ ಮಸಿಯನ್ನು ಬಳಿದು ಹ್ಯಾಂಡ್ ಪ್ರೆಸ್ ಮೂಲಕ ಪ್ರೆಸ್ ಮಾಡಿ ಹಾಳೆಯಲ್ಲಿ ಅಕ್ಷರಗಳನ್ನು ಮುದ್ರಿಸಲಾಗುತ್ತಿತ್ತು. ಆಗಿನ ಕಾಲದಲ್ಲಿ ಇವು ಜನಪ್ರಿಯವಾಗಿದ್ದವು.

ಪತ್ರಿಕೆಗಳು, ಪುಸ್ತಕಗಳು ಮತ್ತು ಇತ್ಯಾದಿಗಳನ್ನು ಮುದ್ರಿಸಲು ಈ ಯಂತ್ರವನ್ನು ಬಳಸಲಾಗುತಿತ್ತು. ಇವುಗಳ ಮೂಲಕ ಜ್ಞಾನ ಪ್ರಸಾರ ವೇಗವಾಗಿ ನಡೆಯುತಿತ್ತು. ಶಿಕ್ಷಣ ಮತ್ತು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕ್ರಾಂತಿಯನ್ನು ತಂದಿದ್ದವು. ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರು ಸಂಗ್ರಹಿಸಿದ್ದು ಪ್ರಸ್ತುತ ಇದನ್ನು ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜು ಉಜಿರೆಯಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

–ರಾಜೇಂದ್ರ ಕುಮಾರ್ ಜೈನ್, ಬೈಲಂಗಡಿ





## ಹೊಂಬಣ್ಣದ ತುತ್ತೂರಿ ಹೂಗಳು

ಚಿತ್ರದಲ್ಲಿ ಕಾಣುವುದು ತುತ್ತೂರಿ ಹೂಗಳು. ಇದು ಬಿಗ್ನೋನಿಯೇಸಿ ಕುಟುಂಬಕ್ಕೆ ಸೇರಿದ ಒಂದು ಸುಂದರ ಹಳದಿ ಹೂಗಳನ್ನು ಬಿಡುವ ಮರ. ಇದನ್ನು ಸಿಲ್ವರ್ ಟ್ರಂಪೆಟ್ ಟ್ರೀ (Sliver Trumpet Tree) ಅಥವಾ ಗೋಲ್ಡನ್ ಬೆಲ್ (Golden Bell) ಎಂದು ಕರೆಯಲಾಗುತ್ತದೆ. ಹೂಗಳು ತುತ್ತೂರಿಯ ಆಕಾರದಲ್ಲಿ ಇರುವುದರಿಂದ ಟ್ರಂಪೆಟ್ ಟ್ರೀ ಎನ್ನುವರು. ಇದರ ಎಲೆಗಳು ಬೆಳ್ಳಿಯ (Silvery) ಬಣ್ಣದಂತಿರುವುದರಿಂದ ಸಿಲ್ವರ್ ಟ್ರಂಪೆಟ್ ಟ್ರೀ ಹೆಸರು ಬಂದಿದೆ.

ಗಾಢ ಚಿನ್ನ ಹಳದಿ ಬಣ್ಣದ ಹೂಗಳಿಂದ ಕಂಗೊಳಿಸುವ ಇದು ದಕ್ಷಿಣ ಅಮೆರಿಕ ಮೂಲದ್ದು. ಉಷ್ಣವಲಯದಲ್ಲಿ ಬೆಳೆಯುವ ಇದು ನಿತ್ಯಹರಿದ್ವರ್ಣದ ಮರವಾಗಿದೆ. ಹೂಗಳಿಂದ ತುಂಬಿರುವಾಗ ಈ ಮರದ ಎಲೆಗಳು ಶಿಶಿರ ಋತುವಿನಲ್ಲಿ ಉದುರಿ ವಸಂತದಾಗಮನ ಪೂರ್ವದಲ್ಲಿ ಅಲ್ಪ ಸ್ವಲ್ಪ ಇರುವುದರಿಂದ ಸುಲಭವಾಗಿ ಗೋಚರಿಸುವುದಿಲ್ಲ. ಬಿರು ಬೇಸಿಗೆ ಆರಂಭಕ್ಕೆ ಸ್ವಾಗತಿಸುವಂತೆ ಫೆಬ್ರುವರಿ, ಮಾರ್ಚ್ ತಿಂಗಳಿನಲ್ಲಿ ಹೊಂಬಣ್ಣದ ಹೂಗಳು ದಾರಿಯ ಅಂಚಿನ ಮರಗಳಲ್ಲಿ ಅರಳಿ ನಿಂತಿರುತ್ತವೆ. ಬೆಂಗಳೂರಿನ ಐಐಎಸ್ಸಿ ಮತ್ತು ಕಬ್ಬನ್ ಪಾರ್ಕ್ ಮುಂತಾದ ಸ್ಥಳಗಳಲ್ಲಿ ಚಿನ್ನ ಹಳದಿ ಬಣ್ಣದ ಹೂವುಗಳು ನಗರವನ್ನು ಅಲಂಕರಿಸಿರುತ್ತವೆ. ಬೇಸಿಗೆ ಏರು ಬಿಸಿಲಿನ ಝಳಕ್ಕೆ ಈ ಹೊಂಬಣ್ಣದ ತುತ್ತೂರಿ ಹೂವುಗಳು ಇನ್ನಷ್ಟು ಥಳಥಳಿಸಿ ಕಣ್ಮನ ಸೆಳೆಯುತ್ತವೆ.

–ಶಾಂತಲಾ ರಾಜಗೋಪಾಲ್